

## ಶಾನ್ವಿ ಎನ್ನುವ ರೋಜಾ

'ಇದು ಅಪ್ಪಟ ಪ್ರೇಮಕಥೆಯ ಸಿನಿಮಾ. ನಾಯಕಿಯ ಪಾತ್ರಕ್ಕೂ ಅಭಿನಯಿಸಲು ಅವಕಾಶ ಇರುವ ಸಿನಿಮಾ'. ಚಿತ್ರಮಂದಿರಗಳ ಹೊಸ್ತಿಲಲ್ಲಿರುವ 'ಸಾಹೇಬ' ಚಿತ್ರದ ಬಗ್ಗೆ ಶಾನ್ವಿ ಶ್ರೀವಾಸ್ತವ ಅವರ ಬಣ್ಣನೆ ಇದು.

ಶಾನ್ವಿ ಮುಂಬೈ ಹುಡುಗಿ. ಕನ್ನಡ ಚಿತ್ರರಂಗದಲ್ಲಿ ನಾಯಕಿಯಾಗಿ ನೆಲೆ ಕಂಡುಕೊಳ್ಳಲು ಹವಣಿಸುತ್ತಿರುವ ಈ ಚೆಲುವೆ ಚಿತ್ರರಸಿಕರಿಗೆ ಹೊಸ ಮುಖವೇನಲ್ಲ. ಶಾನ್ವಿ ನಟನೆಯ 'ಭಲೇ ಜೋಡಿ' ಹಾಗೂ 'ಸುಂದರಾಂಗ ಜಾಣ' ಚಿತ್ರಗಳು ಕಳೆದ ವರ್ಷವಷ್ಟೇ ತೆರೆ ಕಂಡಿವೆ. ಈ ವರ್ಷವಂತೂ ಆಕೆಗೆ ಸಾಕಷ್ಟು ಅವಕಾಶಗಳು ದೊರೆಯುತ್ತಿವೆ. 'ಸಾಹೇಬ' ತೆರೆ ಕಾಣಲು ಸಿದ್ಧವಾಗಿದ್ದರೆ – 'ತಾರಕ್' ಹಾಗೂ 'ಮಫ್ತಿ' ಚಿತ್ರೀಕರಣ ನಡೆಸುತ್ತಿವೆ.

'ಸಾಹೇಬ' ಸಿನಿಮಾದ ಬಗ್ಗೆ ಶಾನ್ವಿಗೆ ಸಾಕಷ್ಟು ನಿರೀಕ್ಷೆಗಳಿವೆ. ಭರತ್ ನಿರ್ದೇಶನದ ಈ ಸಿನಿಮಾ ಅವರ ವೃತ್ತಿಜೀವನದ ವಿಭಿನ್ನ ಪ್ರಯತ್ನಗಳಲ್ಲಿ ಒಂದಂತೆ. ಅಬ್ಬರಕ್ಕಿಂತೂ ಭಾವನೆಗಳಿಗೆ ಹೆಚ್ಚು ಒತ್ತುನೀಡಿರುವ ಈ ಸಿನಿಮಾ ಅಪರೂಪದ ಪ್ರೇಮಕಥೆಯನ್ನು ಹೊಂದಿದೆ ಎನ್ನುವ ಅನಿಸಿಕೆ ಅವರದು.

ರವಿಚಂದ್ರನ್ ಪುತ್ರ ಮನೋರಂಜನ್ ಚಿತ್ರದ ನಾಯಕ. 'ಇದು ನನ್ನ ಹೃದಯಕ್ಕೆ ಹತ್ತಿರವಾದ ಸಿನಿಮಾ' ಎಂದು ಮನೋರಂಜನ್ ಹೇಳಿಕೊಂಡಿರುವುದೇ ಈ ಸಿನಿಮಾದ ಬಗ್ಗೆ ಅವರ ನಿರೀಕ್ಷೆಗಳೆಷ್ಟಿವೆ ಎನ್ನುವುದನ್ನು ಸೂಚಿಸುವಂತಿದೆ. ಸಾಮಾನ್ಯ ಹುಡುಗನೊಬ್ಬ 'ಸಾಹೇಬ'ನಾಗುವ ರೂಪಾಂತರ ಕಥೆ ಚಿತ್ರದ್ದು. ಜಿ.ಎಸ್.ವಿ. ಸೀತಾರಾಂ ಛಾಯಾಗ್ರಹಣ ಹಾಗೂ ಹರಿಕೃಷ್ಣರ ಸಂಗೀತ ಚಿತ್ರಕ್ಕಿದೆ.



## ಧ್ರುವ ಹೊಸ ಸವಾರಿ!

ನಿರ್ದೇಶಕ ನಂದಕಿಶೋರ್ ರೀಮೇಕ್‌ನಿಂದ ಸ್ವಮೇಕ್‌ಗೆ ಪಥ ಬದಲಿಸಿದ್ದಾರೆ. ಅವರು ನಿರ್ದೇಶಿಸಲಿರುವ ಹೊಸ ಸಿನಿಮಾ 'ಹಯಗ್ರೀವ' ಅಪ್ಪಟ ಸ್ವಮೇಕ್ ಚಿತ್ರವಂತೆ.

'ಹಯಗ್ರೀವ'ದ ವಿಶೇಷ ಇರುವುದು ಕಥೆಯ ಜೊತೆಗೆ ಆ ಚಿತ್ರದ ನಾಯಕ ಧ್ರುವ ಸರ್ಜಾ ಎನ್ನುವುದರಲ್ಲಿ. ಧ್ರುವ ನಟನೆಯ ನಾಲ್ಕನೆಯ ಚಿತ್ರವಿದು. 'ಅದ್ದೂರಿ' ಹಾಗೂ 'ಬಹದ್ದೂರ್' ಧ್ರುವ ನಟನೆಯ ಯಶಸ್ವೀ ಚಿತ್ರಗಳು. ಅವರ ಮತ್ತೊಂದು ಸಿನಿಮಾ 'ಭರ್ಜರಿ' ತೆರೆ ಕಾಣುವ ತವಕದಲ್ಲಿರುವ ಸಂದರ್ಭದಲ್ಲೇ, 'ಹಯಗ್ರೀವ' ಸೆಟ್ಟೇರಿದೆ.

'ಹಯಗ್ರೀವ' ಧ್ರುವ ಅವರ ಇಮೇಜ್‌ಗೆ ತಕ್ಕನಾಗಿದೆಯಂತೆ. ಸಾಹಸ ಪ್ರಧಾನ ಕಥನದಲ್ಲಿ ಫ್ಯಾಂಟಸಿಯ ಅಂಶಗಳೂ ಸಾಕಷ್ಟಿವೆಯಂತೆ. ಎಂಟು ಶತಮಾನಗಳ ಹಿಂದಿನ ಕಥೆಯೊಂದಿಗೆ ವರ್ತಮಾನವನ್ನು ಹೊಂದಿಸಿ ನಿರ್ದೇಶಕರು ಕಥೆ ಹೆಣೆದಿದ್ದಾರೆ.

ಬಜೆಟ್ ದೃಷ್ಟಿಯಿಂದ ಕೂಡ ನಂದಕಿಶೋರ್ ಸಿನಿಮಾ ಗಮನ ಸೆಳೆಯುವಂತಿದೆ. ಬಿ.ಕೆ. ಗಂಗಾಧರ್ ನಿರ್ಮಿಸುತ್ತಿರುವ ಈ ಚಿತ್ರದ ಶೂಟಿಂಗ್ ಕರ್ನಾಟಕದ ಜೊತೆಗೆ ಚೀನಾದಲ್ಲೂ ನಡೆಯಲಿದೆ. ಸುಮಾರು ನೂರು ದಿನಗಳ ಕಾಲ ಶೂಟಿಂಗ್ ನಡೆಸಲು ಚಿತ್ರತಂಡ ಉದ್ದೇಶಿಸಿದೆ. ರವಿಚಂದ್ರನ್, ರಮ್ಯಕೃಷ್ಣ, ಪ್ರಕಾಶ್ ರೈ, ರವಿಶಂಕರ್, ಸಾಧು ಕೋಕಿಲ, ಸೋನು ಸೂದ್, ಚಿಕ್ಕಣ್ಣರಂಥ ಪ್ರಸಿದ್ಧರ ತಾರಾಗಣವನ್ನು ನಂದಕಿಶೋರ್ ಕಲೆ ಹಾಕಿದ್ದಾರೆ. ಸದ್ಯಕ್ಕೆ ನಾಯಕಿಯ ಆಯ್ಕೆಯಾಗಿಲ್ಲ. ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕೆ ಇರಲಿದೆ.